RegaNo BC 155

Sri "SATYAVADI"
— DAILY —
MYSORE4
46 th Year

Protect the cow

ಸತ್ಯವಾದಿ
SATYAVADI

19—2—1962

ಪ ಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸ್ಥಾಪಕರು— ಅರಮನೆ ಸಿಂಸ್ಕೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

ಬಂಧನ

ಎಣ್ಣೆ ತುಂಬಿದ ವ್ಯಾಸುಗಳು ಮುಂದಕ್ಕೆ ಹೋಗಲು ಬಿಡದ ಕಾರಣದ ಮೇಲೆ ಒರ್ವ ಜೆಲ್‌ನ 19 ಕೆಲಸಗಾರರು ಮೊನ್ನೆ ಬಂಧಿತರಾದರೆಂದು ಬೊಂಬಾಯಿನಿಂದ ವಾರ್ತೆ ಬಂದಿದೆ.

ಮತ್ತೆ ಸೇನೆ ರವಾನೆ

ಬ್ರಿಟಿಷು ಗಯಾನಕ್ಕೆ ಇಂಗ್ಲೆಂಡು ಮತ್ತೆ ಸೇನೆ ರವಾನಿಸಿದೆ ಎಂದು ಲಂಡನ್ನಿನ ವಾರ್ತೆ

ಬೆಂಕಿ ಅನಾಹುತ

ಬಿಟಿಷು ಗಯಾನದ ರೇಡಿಯೋ ವರದಿಯ ಪ್ರಕಾರ ಜಾರ್ಜ್‌ಟೌನಿನ ವ್ಯಾಪಾರ ಕೇಂದ್ರ ಬೆಂಕಿ ಹಾಗೂ ದಂಗೆಯಿಂದ ನಾಶವಾಗಿದೆ ಪೋಲೀಸರು ಹಾಗೂ ಸೇನಿಕರು ಪರಿಸ್ಥಿತಿಯನ್ನು ಹದಕ್ಕೆ ತಂದರು

ಆರದ ದೀಪ

ಜಪಾನಿನ ನಾರಾದಲ್ಲಿ ಕೊಫುಕು ಪಾನಿನ ಪನ್ನಾಸಾಶ್ರವದಲ್ಲಿ ಬೌದ್ಧ ಗುರು ನೋಬೇದೈಷಿ ಎಂಬಾತನ ಗೋರಿಯಲ್ಲಿ 1126 ವರ್ಷಗಳಿಂದಲೂ ಅಂದ್ರ ಉರಿಯುತ್ತಿದೆಯಂತೆ !

ನೆಹರು ಹಿತೋಕ್ತಿ

ಬಿಹಾರಿನ ದೆಹ್ರಿ-ಆನ್-ಸೋನಿನಲ್ಲಿ ಪ್ರಧಾನಿ ಪಂ|| ನೆಹರು ಮೊನ್ನೆ ಅಲ್ಲಿನ ಪ್ರಪ್ರಥಮ ಕಾಲೇಜನ್ನು ಉದ್ಘಾಟಿಸಿದರು ಕಾಲೇಜಿಗೆ ಜವಾಹರ್‌ಲಾಲ್ ಕಾಲೇಜು ಎಂಬ ಹೆಸರಿಟ್ಟದ್ದನ್ನು ಅವರು ವಿರೋಧ ಮಾಡಿ, ಜೀವಂತವಿರುವವರ ಹೆಸರನ್ನು ಇಡದಿರುವಂತೆ ಬುದ್ಧಿ ಹೇಳಿದರು

ಬಂಡವಾಳಶಾಹಿ ಸಂಸ್ಥೆ

ಬಂಡವಾಳದಾರರಿಗಾಗಿ ಕಾಂಗ್ರೆಸು ಪಕ್ಷವೆ ಇದೆ ಎಂದು ರಾಜ್ಯಸಭೆ ಸದಸ್ಯರಾದ ಶ್ರೀ ಎಂ ಎಸ್ ಗುರುಪಾದಸ್ವಾಮಿಯವರು ಭಾಷಣದಲ್ಲಿ ತಿಳಿಸಿದರು.

ಈ ದಿನ ಚುನಾವಣೆ

ಚಾಮರಾಜನಗರ ಪಾರ್ಲಿಮೆಂಟರಿ ಕ್ಷೇತ್ರದ ಪೂರಾಚುನಾವಣೆ ಈ ದಿನ. ಚಾಮರಾಜನಗರ ಪಾರ್ಲಿಮೆಂಟರಿ ಕ್ಷೇತ್ರ ಹಾಗೂ 24 ವಿಧಾನ ಸಭೆಯ ಕ್ಷೇತ್ರಗಳಿಂದ ಒಟ್ಟು ನೋಂದಾಯಿತ ಸಂಖ್ಯೆ 414982. ಲೋಕಸಭೆಗೆ 4 ಸ್ಪರ್ಧಿಗಳಿದ್ದಾರೆ 8 ವಿಧಾನ ಸಭೆಯ ಕ್ಷೇತ್ರಗಳಿಗೆ 24 ಮಂದಿ ಸ್ಪರ್ಧಿಸಿದ್ದಾರೆ

ಮೈಸೂರು ವಿಭಾಗದಲ್ಲಿ

ಮೈಸೂರು ವಿಭಾಗದಲ್ಲಿ 7 ಲೋಕಸಭೆ ಸ್ಥಾನಗಳಿಗೆ 29 ಮಂದಿ ಉಮೇದುವಾರರೂ ಮತ್ತು 55 ವಿಧಾನ ಸಭಾ ಸ್ಥಾನಗಳಿಗೆ 229 ಮಂದಿ ಸ್ಪರ್ಧಿಗಳಿರುವರು ಒಟ್ಟು ಮತದಾರರ ಸಂಖ್ಯೆ 3077521. ಒಟ್ಟು ಮತದಾನ ಕೇಂದ್ರ 3451

ಆರ್ಡಿನೆನ್ಸ್

ಇಡೀ ಪಶ್ಚಿಮ ಪಾಕಿಸ್ತಾನಕ್ಕೆ ಅನ್ವಯಿಸುವಂತೆ ಗವರ್ನರ್ ಜನರಲ್ ಮುನ್ಸೀ ವಾಜ್ಜೆಯವರು ಪಾಕಿಸ್ತಾನದ ಅಧ್ಯಕ್ಷರಾದ ಅಯ್ಯೂಬ್ ಖಾನರ ಘೋಷಿಸಿರುವರೆಂದು ಕರಾಚಿ ವಾರ್ತೆ

ಟಿಕ್ಕಿ ಷಿಯರ್ಸ್‌ಗಳ ಅಗತ್ಯ

ರಕ್ಷಣಾ ಮಂತ್ರಿ ಶ್ರೀ ವಿ ಕೆ ಕೃಷ್ಣ ಮೆನನ್ ಮೊನ್ನೆ ಬೆಂಗಳೂರಿನಲ್ಲಿ ಮಾತನಾಡುತ್ತಾ, ಭಾರತಕ್ಕೆ ಹೆಚ್ಚು ಮಂದಿ ಟಿಕ್ಕಿ ಷಿಯರ್ಸ್‌ಗಳು ಬೇಕೆಂದು ತಿಳಿಸಿದರು.

ಆಬ್ಕಾರಿ ಬಾಕಿ ವಸೂಲಿ

ಗುಲ್ಬರ್ಗಾ ವಿಭಾಗದಲ್ಲಿ ಆಬ್ಕಾರಿ ಬಾಕಿಯನ್ನು ವಸೂಲು ಮಾಡುವ ನಿರ್ಧಾರವನ್ನು ಸರ್ಕಾರ ಕೈಗೊಂಡಿದೆ 1947 ರ ಸೆಪ್ಟೆಂಬರ್ ವರೆಗೆ ಇರುವ ಬಾಕಿ ಅಂದಾಜು ರೂ 1 ಲಕ್ಷದ 72 ಸಾವಿರ

ಅಧ್ಯಕ್ಷರಿಗೆ ಅಧಿಕಾರ

—

ಪ್ರಜಾಪ್ರಭುತ್ವ ರಕ್ಷಣೆಗೆ ಮುಷ್ಕರ

ಮೆಮೊಯರ್ಸ್ ಮತ್ತು ರಿಫ್ಲೆಕ್ಷನ್ಸ್ ಎಂಬ ತನ್ನ ಪುಸ್ತಕದಲ್ಲಿ ಇನ್ನರ್ ಕಾಂಟ್ಯಾಡಿಕ್ಷನ್ಸ್ ಎಂಬ ವಿಭಾಗದಲ್ಲಿ ಉತ್ತರ ಪ್ರದೇಶದ ಮೊಜಿ ಮುಖ್ಯ ಮಂತ್ರಿ ಡಾ|| ಸಂಪೂರ್ಣಾನಂದರು ಬರೆದು, ಕೇಂದ್ರ ಮಂತ್ರಿಗಳು ರಾಜ್ಯಗಳ ಆಡಳಿತದಲ್ಲಿ ಕೈಹಾಕುತ್ತಿರುವರು ಎಂದಿರುವರು. ಅಧ್ಯಕ್ಷರು ಹಾಗೂ ಪ್ರಧಾನಿಗಳ ಅಧಿಕಾರ ವಿವಾದವನ್ನು ಕುರಿತು ಅವರು ಪ್ರಸ್ತಾಪಿಸುತ್ತಾ, ಭಾರತದಲ್ಲಿ ಪ್ರಜಾಪ್ರಭುತ್ವದ ರಕ್ಷಣೆ ಆಗಬೇಕಾದರೆ ಅಗತ್ಯ ಸಮಯದಲ್ಲಿ ಆಡಳಿತದಲ್ಲಿ ಕೈಹಾಕುವ ಅಧಿಕಾರ ಅಧ್ಯಕ್ಷರಿಗೆ ಇರಬೇಕೆಂದು ಅವರು ತಿಳಿಸಿದರು.

ಕಾಂಗ್ರೆಸು ಯಾವುದೇ ರಚನಾತ್ಮಕ ಕಾರ್ಯವನ್ನು ಮಾಡದಿರುವದು ವಿಷಾದಪಡುವ ಥರ ವಿಷಯ ಭಾವತೀವ್ರತೆಯಾಗಿಯೂ ಕಾಂಗ್ರೆಸು ಯಾವುದೇ ಪ್ರಯೋಜನಕರ ಕೆಲಸವನ್ನು ಮಾಡುತ್ತಿಲ್ಲ. ನಾನಾ ಅಭಿಪ್ರಾಯಗಳನ್ನುಳ್ಳ ಜನರು ಅಲ್ಲಿದ್ದಾರೆ— ಎಂದು ಅವರು ತಿಳಿಸಿರುವರು.

ಬಡತನ ಹೋಗಲು

ಜನರು ಹೆಚ್ಚಾಗಿ ಸಂಪತ್ತು ಗಳಿಸಿದರೆ ಜನತೆಯ ಬಡತನ ಅಗತ್ಯವಾಗಿ ಹೋಗುವುದೆಂದು ಬಿಹಾರಿನ ಡಾಲ್ಟನ್‌ಗಂಜಿನಲ್ಲಿ ಪ್ರಧಾನಿ ನೆಹರು ತಿಳಿಸಿದ್ದಾರೆ

ಪ್ರಾಣಿಗಳ ರೋಗಗಳ ಸಂಬಂಧ ಪಟ್ಟಂತೆ ಹೆಚ್ಚು ಶಿಕ್ಷಣ ಪಡೆಯಲು ಸ್ವಿಡ್ಜರ್ಲೆಂಡಿನ ಸರ್ಕಾರ ಭಾರತೀಯರಿಗೆ ಅವಕಾಶ ಮಾಡಿದೆ.

ವಿವಿಧ ವಿಷಯಗಳು

ಈ ತಿಂಗಳು 6 ನೆಯ ತಾ|| ನಿಂದ ಪತ್ರಿಕೆ ಇಲ್ಲದಿರುವ ಪರಿಜಾತದ ವಿಧಾನ ಸಭೆ ಚುನಾವಣೆಗೆ ಸ್ವತಂತ್ರಪಾಗಿ ಸ್ಪರ್ಧಿಸಿರುವ ಬಾಬು ಬಚನ್‌ಸಿಂಗ್‌ರವರ ಪತ್ರಿಕೆಗಾಗಿ ರೂ. 1 ಸಾವಿರ ಬಹುಮಾನ ಕೊಡುವ ಘೋಷಣೆ ಮಾಡಬೇಕೆಂದು ಪೋಲೀಸು ಸೂಪರ್‌ಟೆಂಡೆಂಟರು ವೇಲಿನವರಿಗೆ ತಿಳಿಸಿರುವದಾಗಿ ಲೂಧಿಯಾನ ವರದಿಯೊಂದು ತಿಳಿಸುತ್ತದೆ

೦೦

ತರೀಕೆರೆ ತಾಲ್ಲೂಕಿನ ಮೂಡಿನಹಳ್ಳಿ ಹಾಗೂ ಗುಡ್ಡಬೋರನಹಳ್ಳಿಯ 5 ಮೈಲುಗಳ ಫಾಸಲೆಯಲ್ಲಿ ವಾರ ತಿಂಗಳುವರೆಗೆ ಚಿಂತೆಯನ್ನು ಬೇಟೆಯಾಡಲು ಅನುವತಿ ಇದೆ

೦೦

ಪೋರ್ಚುಗೀಸು ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಗೋವಾ, ದಿಯು, ಡಾಮ್ರ್ ಗಳಿಗೆ ಪ್ರಾತಿನಿಧ್ಯ ಕೊಟ್ಟಿದೆ ಆ ಸರಕಾರವನ್ನು ಲಿಸ್ಬನ್ನಿನಲ್ಲೇ ನಡೆಸಲಾಗುವದು.

೦೦

ಜಾರಿಗೆ ಬರಲಿರುವ ಪಾಕಿಸ್ತಾನ ಘಟನೆಯ ಆಶ್ರಯದಲ್ಲಿ ಪಾರ್ಲಿಮೆಂಟ್ ಹಾಗೂ ಕಾಸಕ್ ಸಭೆಗಳಿಗೆ ಚುನಾವಣೆ ಏಪ್ರಿಲಿನಲ್ಲಿ ನಡೆಯಲಿದೆ ಎಂದು ಕರಾಚಿ ವಾರ್ತೆ.

೦೦

ವಾಷಿಂಗ್ಟನ್ನಿನಲ್ಲಿ ಪಾಕಿಸ್ತಾನ ರಾಯಭಾರಿ ಅಜೀಜ್ ಅಹಮದರು ಹೇಳಿಕೆಯಿತ್ತು, ಕಾಶ್ಮೀರದ ಬಗ್ಗೆ ಭಾರತ ಪಾಕಿಸ್ತಾನಗಳಿಗಿರುವ ಕಲಹದಿಂದ ಏಷ್ಯದಲ್ಲಿ ಶಾಂತಿಗೆ ತೊಂದರೆ ಆಗಿದೆ ಎಂದರು.

ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ

20 ಪೃಥಮ ಪೂರ್ವಾ

ವಿವಿಧ ವಾರ್ತೆಗಳು

ಹಿಮಾಲಯ ಪ್ರದೇಶದಲ್ಲಿ ಭಾರತ ಪ್ರದೇಶವನ್ನು ಚೀನಾ ಆಕ್ರಮಣ ಮಾಡಿ ಭಾರತಕ್ಕೆ ದ್ರೋಹಮಾಡಿದೆ ಎಂದು ಮೊನ್ನೆ ಬೆಂಗಳೂರಿನಲ್ಲಿ ರಕ್ಷಣಾ ಮಂತ್ರಿ ಶ್ರೀ ವಿ ಕೆ ಕೃಷ್ಣಮೆನನ್ ತಿಳಿಸಿದರು. ಪಾಕಿಸ್ತಾನದ ಬಗ್ಗೆ ಯಾವ ನೀತಿ ಇದೆಯೋ ಅದೇ ನೀತಿ ಚೀನಾದ ಬಗ್ಗೆ ಇದೆ ಎಂದರು.

ಂ ಂ

ಮಾರ್ಚ್ 14 ರಂದು ಜಿನೀವಾದಲ್ಲಿ ನಡೆಯುವ ನಿಶ್ಶಸ್ತ್ರೀಕರಣ ಸಭೆಗೆ ಅಂಬ ಗಣಂತಾಜ್ಯಪ ಅಧ್ಯಕ್ಷ ನಾಸೆರ್‌ರವರು ಹೋಗುವರೆಂದು ಮಾಸ್ಕೊ ರೇಡಿಯೋ ವಂದಿ ಮಾಡಿದೆ.

ಂ ಂ

ಮದ್ರಾಸು ಪಶ್ಚಿಮ ಬಂಗಾಳ, ಬೆಂಗಳೂರು, ಬೆಳಗಾಂ, ಕೊಪ್ಪಾಲ, ಗಳಲ್ಲಿ ಚುನಾವಣೆ ಶಾಂತರೀತಿಯಲ್ಲಿ ನಡೆಯಿತು.

ಂ ಂ

ಭಾರತ ಹಾಗೂ ನೇಪಾಳಗಳ ಬಾಂಧವ್ಯದಲ್ಲಿ ಈಗಿನ ನೇಪಾಳ ಅಡಳಿತಕ್ಕೆ ವಿರೋಧ ಇರುವ ನೇಪಾಳಿಗರು ಭಾರತದಲ್ಲಿ ಮಾಡುತ್ತಿರುವ ಕಾರ್ಯಾಚರಣೆಯಿಂದ ಬಿಕ್ಕಟ್ಟು ಆಗಿದೆ ಎಂದು ಭಾರತದಲ್ಲಿರುವ ನೇಪಾಳದ ರಾಯಭಾರಿ ಶ್ರೀ ನಾರಪ್ರತಾಪ ಶಾಪಂರವರು ನವದೆಹಲಿಯಲ್ಲಿ ತಿಳಿಸಿದ್ದಾರೆ.

ಂ ಂ

ಭೂಪಾಲಿನ ಭಾರೀ ವಿದ್ಯುತ್ ಕಾರ್ಖಾನೆಯಲ್ಲಿ ಮೊನ್ನೆ ಬೆಳಿಗ್ಗೆ ಮುಷ್ಕರ ಹೂಡಿರುವ ಕಾರ್ಮಿಕರಿಗೂ ಪೋಲೀಸರಿಗೂ ಹೊಡೆದಾಟವಾಗಿ 12 ಪೋಲೀಸರು ಸೇರಿ 85 ಮಂದಿಗೆ ಗಾಯವಾಗಿವೆ.

ಂ ಂ

24 ವರ್ಷ ವಯಸ್ಸಿನ ಶ್ರೀಮತಿ ಲೀಲಾ ಸಿನ್ಹ ಎಂಬವರು ಇಂಗ್ಲೆಂಡಿನ ಲಿಸ್ಟರ್‌ನಲ್ಲಿ ಚೆರಿ ವೆಲ್ ಸದಿಯಲ್ಲಿ ಮುಳುಗಿದರು. ಕ್ಷಿತಿಜದಲ್ಲಿರುವ ನಿವೃತ್ತ ಐ ಪಿ ಎಸ್ ಅಧಿಕಾರಿ ಶ್ರೀ ಎಸ್ ಕೆ ಸಿನ್ಹರವರು. ಲಾರ್ಡ್ ಸಿನ್ಹರವರ ಪೌತ್ರಿಗಳು.

ಂ ಂ

ಅಮೆರಿಕ ಅಧ್ಯಕ್ಷರ ಪತ್ನಿ ಶ್ರೀಮತಿ ಕೆನೆಡಿಯವರಿಗೆ 20 ಅಂಗುಲಗಳ ಟಾಜ್‌ಮಹಲ್ ಪ್ರತಿಮೆ ಕೊಡಲಾಗಿದೆ.

ಕಾಗದದ ಮನೆ

ಅವೇಧಕಾದ ವಿಕ್ಟೋರಿಯ ಚೆಟ್ಸ್ ರಾಜ್ಯದಲ್ಲಿ ನ್ಯೂ ಇಂಗ್ಲೆಂಡು ತೀರದಲ್ಲಿ 'ಪಿಜನ್‌ಕೋವ್' ಕಾಗದದ ಮನೆ' ಒಂದಿದೆ: ಈ ಮನೆಯ ಕಟ್ಟೋಣದಲ್ಲಿ ಕಾಗದ ಉಪಯೋಗಿಸದ ವಿದು ಮಾತ್ರವಲ್ಲದೆ ಅಲ್ಲಿಯ ಕುರ್ಚಿ ಮೇಜು ಮುಂತಾದುವುಗಳೆಲ್ಲವೂ ಕಾಗದದ್ದೇ ಆಗಿದೆ; ಇದು 37 ವರ್ಷಗಳಿಂದ ಇದೆ: ಕಾಗದವನ್ನು ಸುರುಳಿ ಸುರುಳಿಗಳಾಗಿ ಅಂಟಿಸಲ್ಪಟ್ಟು, ಅವುಗಳಿಂದ ಕಟ್ಟಿರುವ ಈ ಕಟ್ಟಡವು ಚಳಿ ಮಳೆಗಳನ್ನು ಚೆನ್ನಾಗಿ ಎದುರಿಸಿದೆ; ವಿದ್ಯುಚ್ಛಕ್ತಿಯು ಒಂದು ಬಂಡೆಯು ಅಬ್ಬರದ ಮೇಲಿದೆ; ಮನೆಯು ಚೌಕಟ್ಟು, ನೆಲ ಮತ್ತು ಚಾವಣಿ ಪಿಟ್ಸ್‌ರೆ ವಿುಕ್ಕೆ ಕಾಗದದ್ದೇ ಆಗಿದೆ: 1924 ರಲ್ಲಿ ಕವ್ಯಾಸದಿಂದ ಸ್ಟ್ರಮ್ಯಾಕ್ ಎಂಬಾತನಿಂದ ಕಟ್ಟಿದವು; ಒಂದು ನೂರು ಸಾವಿರ ವೃತ್ತಪತ್ರಿಕೆಗಳೂ (ಎಲ್ಲ ರಾಷ್ಟ್ರದ ಪತ್ರಿಕೆಗಳೂ ಇವೆ) ಇದಕ್ಕೆ ಉಪಯೋಗಿಸಲಾಗಿದೆ; ಮೇಲೆ ವಾರ್ನಿಷು ಹಚ್ಚಲಾಗಿದೆ: ಒಳಗಿನ ಡೆಸ್ಕು, ಕ್ಲಾಕು, ಪಿಯಾನೋ, ಕಾರ್ಪೆಟ್ ಎಲ್ಲವೂ ಕಾಗದದಿಂದಲೇ ತಯಾರಿಸಲಾಗಿದೆ; ಈ ಕಾಗದದ ಮನೆಯು ಪ್ರವಾಸಿಕರಿಗೆ ಆಕರ್ಷಣೀಯವಾಗಿದೆ ವಿಶ್ವ ಒಂದು ಮ್ಯೂಜಿಯಂನಂತಿದೆ; ಪತ್ರಿಕೋದ್ಯೋಗಿಗಳು ಇದನ್ನು ನೋಡಿ ಬಹಳ ಆನಂದಿಸುತ್ತಿದ್ದಾರೆ.

ಲೋಕಸಭೆ ಚುನಾವಣೆಗೆ ಮೈಸೂರು ಜಿಲ್ಲಾ ಕ್ಷೇತ್ರದಿಂದ ಸ್ವತಂತ್ರ ಪಕ್ಷದಿಂದ ಸ್ಪರ್ಧಿಸಿರುವ ನಕ್ಷತ್ರ ಗುರುತನ್ನುಳ್ಳ

ಹೆಚ್. ರಾಮರಾಜ ಅರಸ್

ಇವರಿಗೆ ನಿಮ್ಮ ಪವಿತ್ರವಾದ ಓಟುಕೊಡಬೇಕಾಗಿ ವಿನಂತಿ

Edited, Printed & Published by the Proprietor, Dharma Prrchara Nirata M. S. Krishna Rao, at the Satyavadi Press Chamarajapuram, Mysore 4.

ವುಡ್‌ಲಾಂಡ್ ಕಿಕ್ಕಿರಿದ ಜನಸಂದಣಿಗೆ ಪ್ರದರ್ಶನವಾಗಿ

ಶಿ ಲ್ಪಿಯವರ ಅಮೋಘ 2 ನೇ ವಾರ

.... 30,000 ಕ್ಕೂ ಹೆಚ್ಚು ಮಂದಿ ನೋಡಿ ಆನಂದಿಸಿರುವರು ....

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಆಪೆರಾ ಚಿತ್ರ 18—2—62 ರಿಂದ

ನದಾರಮೆ (ಕನ್ನಡ)

ತಾರಾಗಣ— ಜಿ ಹೆಚ್ ಎಣ್ಣಪ್ಪ, ಶಾಹುಕಾರ್ ಜಾನಕಿ, ಕಲ್ಯಾಣಕುಮಾರ್

ರಾಜಾ ಸುಲೋಚನ, ಪದ್ಮಿನಿ ಪ್ರಿಯದರ್ಶಿನಿ [ದಿನವಹಿ 3 ಆಟಗಳು]

ಮೈಸೂರುನಗರ (ದಕ್ಷಿಣ) ಕ್ಷೇತ್ರದಿಂದ ವಿಧಾನಸಭೆ ಚುನಾವಣೆ

— 25-2-62 —

ನಿಮ್ಮ ಪವಿತ್ರವಾದ ಓಟನ್ನು ಸ್ವತಂತ್ರ ಪಕ್ಷದ

ಡಾ|| ಎನ್. ಎಸ್. ನಾರಾಯಣರಾವ್

ಅವರಿಗೆ ಕೊಡಬೇಕಾಗಿ ವಿನಂತಿ — ಅವರ ಸೀರಿಯಲ್ ನಂ 3

ಅವರ ಗುರುತು ನಕ್ಷತ್ರದ ಮುಂದೆ

ನಕ್ಷತ್ರ X ಹೀಗೆ ಸೀಲ್ ಹಾಕಿ

Patil thanks U S Government, people, for food aid to India